ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ
1951ರ ರಾಜ್ಯ ಹಣಕಾಸು ಸಂಸ್ಥೆಗಳ ಕಾಯಿದೆ ಅನ್ವಯ ಸ್ಥಾಪಿತ
KARNATAKA STATE FINANCIAL CORPORATION
Established under the State Financial Corporations' Act, 1951

IS / ISO 9001 : 2008
BUREAU OF INDIAN STANDARDS QMS

ಸಂಖ್ಯೆ : ಕ.ರಾ.ಹ.ಸಂ./ಪ್ರ.ಕ./
Ref. No. KSFC/H.O./ ED-I/2015-16/46

ದಿನಾಂಕ :
Date 14.01.2016.

**CIRCULAR No. 920**

Sub: Interest Subsidy Scheme for women entrepreneurs
Ref: ಸರ್ಕಾರದ ಆದೇಶ ಸಂಖ್ಯೆ: ಮಮಇ 64 ಮಅನಿ 2014, ಬೆಂಗಳೂರು, ದಿನಾಂಕ : 10.12.2015

-:o:0:o:-

The Government of Karnataka has introduced a scheme for interest subsidy in respect of loans availed by women entrepreneurs. The details of the scheme are issued vide above referred Government Order dated 10.12.2015, a copy of the same along with the detailed guidelines are enclosed herewith for ready reference. Brief details of the scheme are as under:

1. The Scheme is made applicable to the women entrepreneurs who avail term loan from KSFC:-

   (a) for establishing new units in small & medium scale sector and service enterprises;
   (b) for taking up expansion / modernisation / diversification of existing units;
   (c) for the loans sanctioned after 10.12.2015 to women entrepreneurs;

2. The unit should be owned by women entrepreneurs. In case of partnership firms and companies, the women partners / directors shall hold minimum 51% shares.

3. The minimum loan size is ₹5.00 lakhs for all activities, except for existing units going in for expansion / modernisation / diversification. In case of medical and veterinary doctors, the minimum loan size is ₹2.00 lakhs. The maximum loan size is ₹50.00 lakhs.

...2

ಪ್ರಧಾನ ಕಛೇರಿ : ಕೆ.ಎಸ್.ಎಫ್.ಸಿ. ಭವನ, ನಂ. 1/1, ತಿಮ್ಮಯ್ಯ ರಸ್ತೆ, ಕಂಟೋನ್‌ಮೆಂಟ್ ರೈಲ್ವೆ ನಿಲ್ದಾಣದ ಹತ್ತಿರ, ಬೆಂಗಳೂರು-560 052
ದೂರವಾಣಿ ಸಂಖ್ಯೆ ಸಾಮಾನ್ಯ : 22263322 ಫ್ಯಾಕ್ಸ್ : 080-22250126 ಇ-ಮೇಲ್ : info@ksfc.in ವೆಬ್ : www.ksfc.in
HEAD OFFICE : KSFC Bhavan, No. 1/1, Thimmaiah Road, Near Cantonment Railway Station, Bangalore-560 052.
Telephone : Gen : 22263322, Fax : 080-22250126, e-mail : info@ksfc.in Website : www.ksfc.in

4. The unit will be eligible for interest subsidy for a period of 5-years from the date of first disbursement of the loan, even if the repayment period extends beyond five years.

5. The entrepreneurs are eligible to avail the benefits of interest subsidy under the scheme only once.

6. The interest subsidy under the scheme is eligible only for the term loans sanctioned for small and medium scale industries and not applicable to other type of loans such as WCTL, PE loan, Corporate loan, loans to CRE and transport sector etc.,

7. The units which have already availed the interest subsidy under any other scheme of Government of Karnataka / Government of India are not eligible for interest subsidy under this scheme.

8. KSFC shall sanction loans with normal applicable rate of interest and the promoters shall pay the interest accordingly. The effective interest rate to be paid by the beneficiary / borrower is 4% p.a. The difference between the normal lending rate of KSFC and effective interest rate of 4% i.e., 10% will be reimbursed by KSWDC on monthly basis. To avail this interest subsidy, the entrepreneurs shall be regular in repayment of installments.

9. The terms and conditions of loan sanction such as promoter's contribution, DER, security requirements, viability of the project etc., shall be ensured by KSFC as per the prevailing Lending Policy.

....3

10. The selection of women entrepreneurs for extending interest subsidy under the scheme shall be done by the District Level Committee headed by the Branch Managers of KSFC, consisting of District Level Lead Bank Managers, Joint Director of DIC, Deputy Director of Women and Child Welfare Department and Officers of KSWDC as other members.

All the concerned are hereby instructed to go through the GO and follow the guidelines given therein strictly while considering the loan proposal under the scheme. The contents of this circular shall be brought to the notice of all the concerned in your office.

Encl: As above.

**EXECUTIVE DIRECTOR – I**

To:
All BMs / AGMs / DGMs of Branches
All IA cells
All Department Heads in HO
All General Managers
Library
EA to CMD

cc: Executive Director-II - for information

**ಕರ್ನಾಟಕ ಸರ್ಕಾರದ ನಡವಳಿಗಳು**

H.78

16 DEC 2015

**ವಿಷಯ:** ಮಹಿಳಾ ಉದ್ದಿಮೆದಾರರಿಗೆ ಬಡ್ಡಿ ಸಹಾಯಧನ ಯೋಜನೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

**ಓದಲಾಗಿದೆ:**

1. ವ್ಯವಸ್ಥಾಪಕ ನಿರ್ದೇಶಕರು. ಕ.ರಾ.ಹಣಕಾಸು ಸಂಸ್ಥೆ ಇವರ ಪತ್ರ ಸಂಖ್ಯೆ: ಕೆ.ಎಸ್.ಎಫ್.ಸಿ.:M.D:50:2012-13, ದಿ:30.08.2012.
2. ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ಮ.ಅ.ನಿಗಮ. ಇವರ ಪತ್ರ ಸಂಖ್ಯೆ: ಮಅನಿ/ಮಉಸಾಸೌ/2012-13/393, ದಿ:10.12.2012.
3. ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ಹಣಕಾಸು ಸಂಸ್ಥೆ ಇವರ ಪತ್ರ ಸಂಖ್ಯೆ:ಕೆ.ಎಸ್.ಎಫ್.ಸಿ.:GM(c-1)/83/2015-16, ದಿ:17.10.2015.

**ಪ್ರಸ್ತಾವನೆ:**

ಮಹಿಳಾ ಉದ್ದಿಮೆದಾರರಿಗೆ ರೂ. 5.00 ಲಕ್ಷದಿಂದ ರೂ.50.00 ಲಕ್ಷದವರೆಗೆ ಸಾಲ ನೀಡುವಾಗ ಸರ್ಕಾರದಿಂದ 9.5% ರಂತೆ ಬಡ್ಡಿಯನ್ನು ಸಹಾಯಧನದ ರೂಪದಲ್ಲಿ ಪಾವತಿಸುವ ಹೊಸ ಯೋಜನೆಯನ್ನು ಅನುಷ್ಠಾನಗೊಳಿಸಲು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಇವರು ಮೇಲೆ ಓದಲಾದ ಕ್ರ.ಸಂ.(1) ದಿ:30.08.2012ರ ಪತ್ರದಲ್ಲಿ ಕೋರಿರುತ್ತಾರೆ.

ಮಹಿಳಾ ಉದ್ದಿಮೆದಾರರಿಗೆ ಸಣ್ಣ/ ಮಧ್ಯಮ ಕೈಗಾರಿಕೆಗಳಿಗೆ ಸಾಲ ಸೌಲಭ್ಯಗಳನ್ನು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ವತಿಯಿಂದ ರೂ.5.00 ಲಕ್ಷದಿಂದ ರೂ.50.00 ಲಕ್ಷದವರೆಗೆ ನೀಡುತ್ತಿದ್ದು, ಇದಕ್ಕಾಗಿ ಶೇ. 13 ರಿಂದ 14 ರಷ್ಟು ಬಡ್ಡಿಯನ್ನು ವಿಧಿಸುತ್ತಿದ್ದು ಮಹಿಳಾ ಉದ್ದಿಮೆದಾರರಿಗೆ ವಿಧಿಸುತ್ತಿರುವ ಬಡ್ಡಿಯು ಹೆಚ್ಚಿನದಾಗಿರುವ ಕಾರಣ ಮಹಿಳಾ ಉದ್ದಿಮೆದಾರರು ಹೆಚ್ಚಿನ ಸಂಖ್ಯೆಯಲ್ಲಿ ಉದ್ದಿಮೆ ನಡೆಸಲು ಮುಂದೆ ಬರುತ್ತಿಲ್ಲದಿರುವುದನ್ನು ಗಮನಿಸಿ, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವು ಇವರುಗಳಿಗೆ ಹೆಚ್ಚಿನ ಉತ್ತೇಜನ ನೀಡುವ ಸಲುವಾಗಿ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಪ್ರಸ್ತಾವನೆಯನ್ನು ಮಾರ್ಪಡಿಸಿ, ಬಡ್ಡಿ ಸಹಾಯಧನ 10% ರಂತೆ ಪಾವತಿಸಲು ಉಳಿದ 4% ಬಡ್ಡಿಯನ್ನು ಫಲಾನುಭವಿಗಳು ಪಾವತಿಸುವ ಬಗ್ಗೆ ಸರ್ಕಾರಿ ಆದೇಶ ಹೊರಡಿಸುವಂತೆ ಮೇಲೆ ಓದಲಾದ ಕ್ರ.ಸಂ.(2)ರ ದಿ:10.12.2012ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಇವರು ಕೋರಿರುತ್ತಾರೆ.

ಮೇಲೆ ಕ್ರ.ಸಂ.(3) ಓದಲಾದ ದಿ:17.10.2015ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಇವರು ಮಹಿಳಾ ಉದ್ದಿಮೆದಾರರಿಗೆ ಸಣ್ಣ ಮತ್ತು ಮಧ್ಯಮ ಗಾತ್ರದ ಕೈಗಾರಿಕೆಗಳನ್ನು ಸ್ಥಾಪಿಸಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮೂಲಕ ಸಾಲ ಮಂಜೂರಾತಿಯನ್ನು ಶೇ.10ರಷ್ಟು ಬಡ್ಡಿ ಸಹಾಯಧನದೊಂದಿಗೆ ನೀಡಲು ಸಹಮತಿ ನೀಡಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಮಮಇ 64 ಮಅಪಿ 2014, ಬೆಂಗಳೂರು, ದಿನಾಂಕ:10.12.2015**

ಕರ್ನಾಟಕ ರಾಜ್ಯ ಹಣಕಾಸು ನಿಗಮದ ಮೂಲಕ ಸಣ್ಣ / ಮಧ್ಯಮ ಕೈಗಾರಿಕೆಗಳು ಹಾಗೂ ಸೇವಾ ಘಟಕಗಳಿಗೆ ಉದ್ಯೋಗ ಚಟುವಟಿಕೆಗಳಲ್ಲಿ ಭಾಗವಹಿಸಿ ಕನಿಷ್ಠ ರೂ.5.00 ಲಕ್ಷದಿಂದ ರೂ.50.00 ಲಕ್ಷದವರೆಗೆ ಸಾಲ ಪಡೆಯುವ ಮಹಿಳೆಯರಿಗೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಸಹಯೋಗದೊಂದಿಗೆ ಕರ್ನಾಟಕ

ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಶೇ.10% ಬಡ್ಡಿ ಸಹಾಯಧನ ನೀಡುವ ಯೋಜನೆಯನ್ನು ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿನ ರೂಪುರೇಷೆಗಳೊಳಗೊಂಡಂತೆ 2015-16ನೇ ಸಾಲಿನಿಂದ ಆದೇಶ ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಸರ್ಕಾರದ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗಿದೆ.

ಈ ಯೋಜನೆಗಾಗಿ ತಗಲುವ ವೆಚ್ಚವನ್ನು 2015-16ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ: 2235-02-001-0-10-106 ಸಹಾಯಧನ 422-ಪರಿಶಿಷ್ಟ ಜಾತಿ ಉಪಯೋಜನೆ, 423-ಗಿರಿಜನ ಉಪಯೋಜನೆ (ಯೋಜನೆ)ಯಡಿಯಲ್ಲಿ ಒದಗಿಸಿರುವ ರೂ. 221.00 ಲಕ್ಷಗಳ (ಎರಡುನೂರಾ ಇಪ್ಪತ್ತೊಂದು ಲಕ್ಷಗಳು ಮಾತ್ರ) ಅನುದಾನದಿಂದಲೇ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ:ಆಇ 633 ವೆಚ್ಚ-3 2015, ದಿನಾಂಕ:3.7.2015ರ ನೀಡಿರುವ ಸಹಮತಿ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

10/12/15
(ಜಯಲಕ್ಷ್ಮಿ)
ಸರ್ಕಾರದ ಅಧೀನ ಕಾರ್ಯದರ್ಶಿ-2,
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, (ಜಿ & ಎಸ್ಎಸ್ಎ) ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ: 5398, ಕರ್ನಾಟಕ, ಬೆಂಗಳೂರು-01.
2. ಮಹಾಲೇಖಪಾಲರು, (ಇಆರ್ಎಸ್ಎ) ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ: 5398, ಕರ್ನಾಟಕ, ಬೆಂಗಳೂರು-01.
3. ಮಹಾಲೇಖಪಾಲರು, (ಎ & ಇ) ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ: 5398, ಕರ್ನಾಟಕ, ಬೆಂಗಳೂರು-01.
4. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
5. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, ಬೆಂಗಳೂರು.
6. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ಬೆಂಗಳೂರು.
7. ಆಂತರಿಕ ಆರ್ಥಿಕ ಸಲಹೆಗಾರರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
8. ಕಾರ್ಯದರ್ಶಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ವಿಧಾನ ಸೌಧ, ಬೆಂಗಳೂರು.
9. ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
10. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
11. ಸರ್ಕಾರದ ಉಪಕಾರ್ಯದರ್ಶಿರವರು, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಆಪ್ತ ಸಹಾಯಕರು, ಬಹುಮಹಡಿಗಳ ಕಟ್ಟಡ, ಬೆಂಗಳೂರು
12. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-3), ವಿಧಾನಸೌಧ, ಬೆಂಗಳೂರು.
13. ಸರ್ಕಾರದ ಅಧೀನ ಕಾರ್ಯದರ್ಶಿ-1, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
14. ಶಾಖಾಧಿಕಾರಿ, ಸ್ತ್ರೀಮರ ಶಾಖೆ, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿಗಳ ಕಟಡ, ಬೆಂಗಳೂರು.

ಸರ್ಕಾರಿ ಆದೇಶ ಸಂಖ್ಯೆ: ಮಮಇ 64 ಮಅನಿ 2014, ದಿನಾಂಕ: 10-12-2015ಕ್ಕೆ ಅನುಬಂಧ:-

# ಬಡ್ಡಿ ಸಹಾಯಧನ ಯೋಜನೆ ಮಾರ್ಗಸೂಚಿ

ಕರ್ನಾಟಕ ರಾಜ್ಯ ಹಣಕಾಸು ನಿಗಮದವರು ರಾಜ್ಯದಲ್ಲಿ ಸಣ್ಣ / ಮಧ್ಯಮ ಕೈಗಾರಿಕೆಗಳು ಹಾಗೂ ಸೇವಾ ಘಟಕಗಳ ಮಹಿಳಾ ಉದ್ದಿಮೆದಾರರಿಗೆ ಶೇ 13% ರಿಂದ 14% ರಂತೆ ಬಡ್ಡಿಯನ್ನು ವಿಧಿಸುತ್ತಿರುವುದಾಗಿ ತಿಳಿಸುತ್ತಾ ಈ ಉದ್ದಿಮೆದಾರರಿಗೆ ಹೆಚ್ಚಿನ ಆಧ್ಯತೆ ಹಾಗೂ ಉತ್ತೇಜನ ನೀಡುವ ಸಲುವಾಗಿ ಬಡ್ಡಿಯಲ್ಲಿ ರಿಯಾಯಿತಿಯನ್ನು ನೀಡಲು ಸರ್ಕಾರವು ಈ ಯೋಜನೆಯನ್ನು ಜಾರಿಗೆ ತರಲು ಉದ್ದೇಶಿಸಿದೆ.

ಈ ಯೋಜನೆಯಡಿಯಲ್ಲಿ ಸುಮಾರು ರೂ.5.00 ಲಕ್ಷದಿಂದ ಗರಿಷ್ಠ ರೂ.50.00 ಲಕ್ಷದವರೆಗೆ ಸಾಲವನ್ನು ಕಲ್ಪಿಸಲಾಗುತ್ತಿದೆ. ಬಡ್ಡಿ ಸಹಾಯಧನ ಯೋಜನೆಯ ರೂಪುರೇಷೆಗಳು ಈ ಕೆಳಕಂಡಂತಿದೆ.

1. **ಉದ್ದೇಶ :** ಸಣ್ಣ / ಮಧ್ಯಮ ಕೈಗಾರಿಕೆಗಳು ಹಾಗೂ ಸೇವಾ ಘಟಕಗಳ ಮಹಿಳಾ ಉದ್ದಿಮೆದಾರರಿಗೆ ಉತ್ತೇಜನ ನೀಡುವ ಸಲುವಾಗಿ ಹಾಗೂ ಹಾಲಿ ಕಾರ್ಯನಿರ್ವಹಿಸುತ್ತಿರುವ ಘಟಕಗಳನ್ನು ಅಭಿವೃದ್ಧಿ ಪಡಿಸುವ ಸಲುವಾಗಿ.
2. **ನೋಡಲ್ ಏಜೆನ್ಸಿ :** ಈ ಯೋಜನೆಯನ್ನು K.S.F.C. ರವರ ಸಹಯೋಗದೊಂದಿಗೆ ಕಾರ್ಯರೂಪಕ್ಕೆ ತರಲಾಗುತ್ತದೆ.
3. **ಅರ್ಹತೆ :** ಈ ಕೆಳಗಿನಂತೆ ಯೋಜನೆಯಡಿ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ.
   (ಎ) ಮೊದಲನೇ ಬಾರಿ ಹೊಸ ಘಟಕವನ್ನು ಮಹಿಳಾ ಉದ್ದಿಮೆದಾರರು ಪ್ರಾರಂಭಿಸುವ ಸಲುವಾಗಿ.
   (ಬಿ)ಹಾಲಿ ಕಾರ್ಯನಿರ್ವಹಿಸುತ್ತಿರುವ ಸಣ್ಣ/ ಮಧ್ಯಮ ಕೈಗಾರಿಕೆಗಳು ಹಾಗೂ ಸೇವಾ ಘಟಕಗಳ ಉದ್ದಿಮೆದಾರರಿಗೆ ತಮ್ಮ ಘಟಕವನ್ನು ಅಭಿವೃದ್ಧಿ ಪಡಿಸುವ ಸಲುವಾಗಿ/ ಆಧುನೀಕರಣಗೊಳಿಸುವ ಸಲುವಾಗಿ
   (ಸಿ) (1) ಈ ಘಟಕದ ಮಾಲೀಕರು ಮಹಿಳಾ ಅಭ್ಯರ್ಥಿಯಾಗಿರಬೇಕು.
   (2)ಪಾಲುದಾರಿಕೆಯ ಉದ್ಯಮ /ನಿಯಮಿತ ಕಂಪನಿಗಳಲ್ಲಿ ಹೆಚ್ಚಿನ ಷೇರು/ ನಿರ್ದೇಶಕರು ಶೇ 51% ಇರಬೇಕು.
   (3)ಸಾಲದ ಗಾತ್ರ : ಎಲ್ಲಾ ಚಟುವಟಿಕೆಗಳಿಗೆ ಕನಿಷ್ಠ ರೂ.5.00 ಲಕ್ಷಗಳವರೆಗೆ ಸಾಲ ಈಗಾಗಲೇ ತೆಗೆದುಕೊಂಡ ಘಟಕಗಳ ವಿಸ್ತರಣೆ/ ಆಧುನಿಕರಣ/ ಹಾಗೂ ಬದಲಿಕೆ ಹೊರತು ಪಡಿಸಿ, ವೈದ್ಯರು ಹಾಗೂ ಪಶು ವೈದ್ಯರು ಇವರಿಗೆ ಕನಿಷ್ಠ ಶೇ.2.00ಲಕ್ಷಗಳ ಸಾಲ.
   (4)ಫಲಾನುಭವಿಗಳು ಒಂದು ಸಲ ಮಾತ್ರ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ.

**ಯೋಜನಾ ಗಾತ್ರ :** ಈ ಯೋಜನೆಯಡಿಯಲ್ಲಿ ಗರಿಷ್ಟ ರೂ.50.00 ಲಕ್ಷಗಳವರೆಗೆ ಸಾಲ ಸೌಲಭ್ಯವನ್ನು ಕೆ.ಎಸ್.ಎಫ್.ಸಿ. ಮೂಲಕ ಕಲ್ಪಿಸಲಾಗುತ್ತದೆ.

**ಬಡ್ಡಿ ಸಹಾಯಧನ :** ಕರ್ನಾಟಕ ರಾಜ್ಯ ಹಣಕಾಸು ನಿಗಮ ಸಾಲವನ್ನು ಮಂಜೂರು ಮಾಡುತ್ತದೆ. ಇದಕ್ಕೆ ಅವರ ನೀತಿ ನಿಬಂಧನೆಗಳಂತೆ ಬಡ್ಡಿಯನ್ನು ವಿಧಿಸುತ್ತಾರೆ. ಫಲಾನುಭವಿಗಳು ಕೆ.ಎಸ್.ಎಫ್.ಸಿ. ರವರು ವಿಧಿಸುವ ಬಡ್ಡಿಯಂತೆ ಪಾವತಿಸಬೇಕಾಗಿದೆ. ಕೆ.ಎಸ್.ಎಫ್.ಸಿ. ವಿಧಿಸುವ ಸಾಮಾನ್ಯ ಬಡ್ಡಿದರದ ಶೇ.10% ರ ವ್ಯತ್ಯಾಸ ಮೊತ್ತವನ್ನು ಬಡ್ಡಿ ಸಹಾಯಧನವೆಂದು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಮಾಸಿಕವಾಗಿ ಮರುಪಾವತಿಸಲಾಗುತ್ತದೆ. ಈ ಬಡ್ಡಿ ಸಹಾಯಧನವನ್ನು ಪಡೆಯಲು ಫಲಾನುಭವಿಗಳು ಕೆ.ಎಸ್.ಎಫ್.ಸಿ. ಸಂಸ್ಥೆಗೆ ಚಾಚೂ ತಪ್ಪದೇ ಪ್ರತಿ ತಿಂಗಳು ಮರುಪಾವತಿಮಾಡುವಂತಹವರಿಗೆ ಲಭ್ಯವಾಗುತ್ತದೆ. ಇದರಿಂದ ಫಲಾನುಭವಿಗಳಿಗೆ ವಾರ್ಷಿಕ ಶೇ.4% ರಂತೆ ಬಡ್ಡಿ ಅನ್ವಯವಾಗುತ್ತದೆ.

..2

**ಬಡ್ಡಿ ಸಹಾಯಧನದ ಅವಧಿ :** ಫಲಾನುಭವಿಯು ಸಾಲ ಪಡೆದ ದಿನಾಂಕದಿಂದ 5 ವರ್ಷಗಳವರೆಗೆ ಬಡ್ಡಿ ಸಹಾಯಧನಕ್ಕೆ ಅರ್ಹರಾಗಿರುತ್ತಾರೆ. ಘಟಕ ವೆಚ್ಚಕ್ಕೆ ಅನುಸಾರವಾಗಿ ಕೆ.ಎಸ್.ಎಫ್.ಸಿ. ಯವರು ಮರುಪಾವತಿಯ ಅವಧಿಯನ್ನು ವಿಸ್ತರಿಸುವ ಅಧಿಕಾರ ಹೊಂದಿರುತ್ತಾರೆ. ಬಡ್ಡಿ ಸಹಾಯಧನ ಯೋಜನೆಯು 5 ವರ್ಷಕ್ಕೆ ಮಾತ್ರ ಸೀಮಿತವಾಗಿರುತ್ತದೆ.

**ಇತರೆ ನಿಬಂಧನೆಗಳು :**

(1) ಈ ಬಡ್ಡಿ ಸಹಾಯಧನವು ಮಧ್ಯಮ ಹಾಗೂ ಸಣ್ಣ ಸಾಲದ ಉದ್ದಿಮೆದಾರರಿಗೆ ಅವಧಿ ಸಾಲಕ್ಕೆ ಮಾತ್ರ ಅನ್ವಯವಾಗುತ್ತದೆ. ಇತರೆ ಚಟುವಟಿಕೆಗಳು ಅಂದರೆ, ಕಟ್ಟಡ ನಿರ್ಮಾಣ, ಸಾರಿಗೆ ವಾಹನಗಳಿಗೆ ಈ ಯೋಜನೆಯಲ್ಲಿ ಅನ್ವಯವಾಗುವುದಿಲ್ಲ.

(2) ಈ ಬಡ್ಡಿ ಸಹಾಯಧನವು ಹೂಡಿಕೆ ಬಂಡವಾಳ ಹಾಗೂ Fixed Assets ಖರೀದಿಸಲು ಮಾತ್ರ ಮಂಜೂರಾತಿಯನ್ನು ನೀಡಲಾಗುತ್ತದೆ. ಹಾಗೂ ಈ ಅವಧಿ ಸಾಲವು ಏಕ ಮುಖ ಯೋಜನೆಯಾಗಿರುತ್ತದೆ. ಹೆಚ್ಚುವರಿ ಹೂಡಿಕೆ ಮೊತ್ತಕ್ಕೆ ಹಾಗೂ ಇತರೆ ಸಾಲಕ್ಕಾಗಿ ಹೆಚ್ಚುವರಿ ಹಣ ಬೇಕಾದಲ್ಲಿ ಹಾಗೂ ಇತರರಿಗೆ ಈ ಅವಧಿ ಸಾಲದ ಮೇಲಿನ ಬಡ್ಡಿ ಸಹಾಯಧನ ಅನ್ವಯವಾಗುವುದಿಲ್ಲ.

(3) ಈ ಯೋಜನೆಯಡಿಯಲ್ಲಿ ಈಗಾಗಲೇ ಸರ್ಕಾರ / ಕೇಂದ್ರ ಸರ್ಕಾರದಿಂದ ಈಗಾಗಲೇ ಘಟಕ ಪ್ರಾರಂಭಿಸಲು ಬಡ್ಡಿ ಸಹಾಯಧನ ಪಡೆದಿದ್ದಲ್ಲಿ ಅಂತಹವರಿಗೆ ಈ ಯೋಜನೆಯಡಿಯಲ್ಲಿ ಅವಕಾಶವಿರುವುದಿಲ್ಲ. ಹೀಗಿದ್ದರೂ Fixed Assets ಮೇಲೆ ಹೂಡುವ ಬಂಡವಾಳಕ್ಕೆ ಹಾಲಿ ಇರುವ ನೀತಿ ಮತ್ತು ನಿಯಮಕ್ಕೆ ಅನುಸಾರ ಬಡ್ಡಿ ಸಹಾಯಧನ ಯೋಜನೆಯಲ್ಲಿ ಅವಕಾಶವಿರುತ್ತದೆ.

(4) ಇತರೆ ಸಾಲ ನೀಡುವ ಷರತ್ತುಗಳು ಅಂದರೆ : ಉದ್ದಿಮೆದಾರರ ಬಂಡವಾಳ, Debt equity ratio, Security requirement ಮತ್ತು ಇತರೆ ಉದ್ದಿಮೆದಾರರಿಗೆ K.S.F.C. ಮೂಲಕ ಬೇಕಾದಂತ ಸಾಲವನ್ನು ಫಲಾನುಭವಿಗೆ K.S.F.C.ರವರು ಯೋಜನೆಯನ್ನು ಪರಿಶೀಲಿಸಿ ಇವರ ಸಾಂದ್ರತೆ ಆರ್ಥಿಕ ಸಮಂಜಸವ ಬಗ್ಗೆ ದೃಢೀಕರಿಸಿಕೊಂಡು ಯೋಜನೆಯನ್ನು ಅನುಮೋದಿಸುವುದು ಹಾಗೂ ನಿಗದಿತ ಅವಧಿಯೊಳಗೆ ವಸೂಲಿ ಮಾಡಿಕೊಳ್ಳುವ ಸಂಪೂರ್ಣ ಜವಾಬ್ದಾರಿ K.S.F.C.ಯದಾಗಿರುತ್ತದೆ. ರಾಜ್ಯ ಹಣಕಾಸು ಸಂಸ್ಥೆಯೇ ನಿಯಮಾನುಸಾರ Security ಪಡೆದು ಸಾಲ ಮಂಜೂರು ಮಾಡಲು ಕ್ರಮವಹಿಸತಕ್ಕದ್ದು. ಫಲಾನುಭವಿಯು ಯಾವುದೇ ರೀತಿಯಲ್ಲಿ ನಷ್ಟ ಹೊಂದಿದಲ್ಲಿ ಅಥವಾ ಸಾಲ ಮರುಪಾವತಿಸದಿದ್ದಲ್ಲಿ ಸರ್ಕಾರ ಅಥವಾ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಹೊಣೆಯಾಗುವುದಿಲ್ಲ/ ಜವಾಬ್ದಾರರಲ್ಲ.

(5) ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ನೀಡುವ ಬಡ್ಡಿ ಸಹಾಯಧನ ಯೋಜನೆ ಅಡಿಯಲ್ಲಿ K.S.F.C.ಯವರು ಜಿಲ್ಲಾ ಮಟ್ಟದಲ್ಲಿ ಮಹಿಳಾ ಉದ್ದಿಮೆದಾರರನ್ನು ಆಯ್ಕೆ ಮಾಡುವಾಗ K.S.F.C. ಜಿಲ್ಲಾ ವ್ಯವಸ್ಥಾಪಕರ ಅಧ್ಯಕ್ಷತೆಯ ಸಮಿತಿಯಲ್ಲಿ ಆಯಾ ಜಿಲ್ಲೆಯ ಲೀಡ್ ಬ್ಯಾಂಕಿನ ವ್ಯವಸ್ಥಾಪಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಜಂಟಿ ನಿರ್ದೇಶಕರು, ಉಪ ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಅಭಿವೃದ್ಧಿ ನಿರೀಕ್ಷಕರು ಆಯ್ಕೆ ಸಮಿತಿಯ ಸದಸ್ಯರಾಗಿರತಕ್ಕದ್ದು. ಸಮಿತಿ ಆಯ್ಕೆ ಮಾಡಿದ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು K.S.F.C. ಕೇಂದ್ರ ಕಛೇರಿಗೆ ಸಲ್ಲಿಸಿ, ಅದರ ಪ್ರತಿಯನ್ನು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮಕ್ಕೆ ಸಲ್ಲಿಸುವುದು.

(6) K.S.F.C.ಯವರು ಅವಧಿ ಸಾಲ ಮಂಜೂರಾದ ಮಹಿಳಾ ಉದ್ದಿಮೆದಾರರಿಗೆ ಸಾಲ ಬಿಡುಗಡೆಯಾದ ನಂತರ ಇವರ ಪಟ್ಟಿಯನ್ನು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮಕ್ಕೆ ಕಳುಹಿಸಿ ಬಡ್ಡಿ ಸಹಾಯಧನದ ಬಿಡುಗಡೆಗೆ ಕೋರಿಕೆ ಪತ್ರ ಸಲ್ಲಿಸಿದ ನಂತರ ಹಣ ಬಿಡುಗಡೆ ಮಾಡಲು ಕ್ರಮವಹಿಸಲಾಗುತ್ತದೆ. ಈ ಯೋಜನೆಯು ದಿನಾಂಕ:10-12-2015ರ ನಂತರ ಮಂಜೂರಾದ ಸಾಲಗಳಿಗೆ ಅನ್ವಯವಾಗುತ್ತದೆ.

10/12/15
(ಜಯಲಕ್ಷ್ಮಿ)
ಸರ್ಕಾರದ ಅಧೀನ ಕಾರ್ಯದರ್ಶಿ 2